ಶ್ರೀ ಬಾಪೂಗೌಡ.— ರಾಯಚೂರು ಜಿಲ್ಲೆಯಲ್ಲಿ ಒಂದು ಏರ್‌ಸ್ಟ್ರಿಪ್ ಮಾಡುವುದರಿಂದ ಬದರ್ ಮತ್ತು ಗುಲ್ಬರ್ಗ ಜಿಲ್ಲೆಯವರಿಗೆ ಅನುಕೂಲವಾಗುತ್ತದಲ್ಲವೇ ?

ಶ್ರೀ ಬಿ. ವಿ. ಮಾಗಾವಿ.— ಅದು ಮಾನ್ಯ ಸದಸ್ಯರ ನಲಹೆ.

ಶ್ರೀ ವಿ. ಎನ್. ಪಾಟೀಲ್.—ರಾಯಚೂರ್ ಜಿಲ್ಲೆಯಲ್ಲಿ ಜಿನ್ನಿಂಗ್ ಫ್ಯಾಕ್ಟರಿ ಇದೆ. ಗಂಗಾವತಿ ಮತ್ತು ಸಿಂಧನೂರ್ ಬೆಲ್ಟ್ ಏರಿಯಾ ಇದೆ. ಅಮೆರಿಕಾ ಪೀಸ್ ಕೋರ್ ಸೇಕಡ 70ರಷ್ಟು ಇದ್ದಾರೆ. ಹಟ್ಟಿ ಗೋಲ್ಡ್ ಮೈನ್ಸ್ ಇದೆ. ಇವೆಲ್ಲವನ್ನೂ ಅಭಿವೃದ್ಧಿ ಮಾಡಬೇಕಾದರೆ ಅಲ್ಲಿ ಒಂದು ಏರ್ ಸ್ಟ್ರಿಪ್ ಮಾಡಬೇಕಲ್ಲವೇ ?

ಶ್ರೀ ಬಿ. ವಿ. ಮಾಗಾವಿ.—ಮಂಗಳೂರು—ಬೆಳಗಾಂನಲ್ಲಿರತಕ್ಕ ಏರ್ ಸ್ಟ್ರಿಪ್ ಕೂಡ ಅಷ್ಟಾಗಿ ಸಾಕಷ್ಟು ಫಲದಾಯಕವಾಗಿಲ್ಲ. ಅಂದಮೇಲೆ ಹೊಸದಾಗಿ ಏರ್‌ಸ್ಟ್ರಿಪ್‌ಗಳನ್ನು ಮಾಡುವುದಕ್ಕೆ ಅವರ ಒಪ್ಪಿಗೆ ಇಲ್ಲವೆಂದು ಹೇಳುತ್ತೇನೆ.

ಶ್ರೀ ಕೆ. ಸಂಗನಗೌಡ.—ಇವತ್ತು ಸಂಯುಕ್ತ ಕರ್ನಾಟಕದಲ್ಲಿ ಹಾನನ ಜಿಲ್ಲೆಯಲ್ಲಿ ಒಂದು ಏರ್‌ಸ್ಟ್ರಿಪ್ ಮಾಡುವ ವಿಚಾರ ಬಂದಿದೆ. ಅಂದಮೇಲೆ ರಾಯಚೂರು ಜಿಲ್ಲೆಯಲ್ಲಿ ಬೇಕಾದಷ್ಟು ಅನುಕೂಲತೆಗಳು ಇರುವುದರಿಂದ ಅಲ್ಲಿ ಒಂದು ಏರೋಡ್ರೋಂ ಮಾಡುವುದಕ್ಕೆ ಇರುವ ಆಂತವೇನು ?

ಶ್ರೀ ಬಿ. ವಿ. ಮಾಗಾವಿ.—ಸದಸ್ಯರ ಇಚ್ಛೆಯನ್ನು ಕೇಂದ್ರಸರ್ಕಾರದ ಗಮನಕ್ಕೆ ತರಬಹುದು. ಕೊನೆಯದಾಗಿ ಅದನ್ನು ಒಪ್ಪಿಕೊಳ್ಳುವುದು, ಬಿಡುವುದು ಕೇಂದ್ರಸರ್ಕಾರಕ್ಕೆ ಸಂಬಂಧಪಟ್ಟ ವಿಚಾರ.

ಶ್ರೀ ಎಸ್. ಸದಾಶಿವಪ್ಪ ಪಾಟೀಲ್.—ಇಲ್ಲಿ ಭಾರತ ಸರ್ಕಾರದವರಿಗೆ ಶಿಫಾರಸು ಮಾಡಲು ಸರ್ಕಾರದವರಲ್ಲಿ ಯೋಜನೆ ಏನಾದರೂ ಇದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಇದಕ್ಕೆ ಹೆಚ್ಚಿನ ಮಹತ್ವ ಕೊಡಬೇಕಾಗಿದೆ ಏಕೆಂದರೆ, ಹಿಂದೆ ದಿವಂಗತ ನೆಹರೂರವರು ಒಮ್ಮೆ ದೆಹಲಿಗೆ ಹೋಗುವಾಗ ವಿಮಾನಕ್ಕೆ ಬೆಂಕಿ ಹತ್ತಿದಾಗ ಅದೇ ವಿಮಾನ ನಿರ್ವಾಣ ಅದನ್ನು ಉಳಿಸಿದ್ದು ಎಂದು ಹೇಳಬಹುದು. ಆದಕಾರಣದಿಂದ ಇದನ್ನು ಏನಾದರೂ ಯೋಚನೆ ಮಾಡುತ್ತೀರಾ ?

ಶ್ರೀ ಬಿ. ವಿ. ಮಾಗಾವಿ.— ಜವಹರಲಾಲ್ ನೆಹರೂ ಇಳಿದ ಬಗ್ಗೆ ರಿಕಾರ್ಡು ಮೇರೆ ಯಾವುದೂ ಮಾಹಿತಿ ಇಲ್ಲ. ನಾನೂ ಕೇಳಿದ್ದೇನೆ. ಅಂದ ಮಾತ್ರಕ್ಕೆ ಅದನ್ನು ಮಾಡಬೇಕೆಂದು ಹೇಳಿದರೆ ಕಷ್ಟವಾಗುತ್ತದೆ.

Sri THIRUMALADEVARAYA.— May I know whether any survey was conducted at Ginigere for an air strip ?

ಶ್ರೀ ಬಿ. ವಿ. ಮಾಗಾವಿ.—ಅನೇಕ ಕಡೆಗಳಲ್ಲಿ ಅವುಗಳನ್ನು ಇನ್‌ವೆಸ್ಟಿಗೇಟ್ ಮಾಡಿ ಎಸ್ಟಿಮೇಟ್ ಕೂಡ ಮಾಡಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಸಿಕ್ಕದ ಕಾರಣ ತೆಗೆದು ಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ.

Mr. SPEAKER:—Sri C. M. Churchihal Math may put Q. No. 373 on behalf of Sri S. R. Bommai.

Acquisition proceedings Pending in Kundgol Taluk

373. Sri C. M. CHURCHIHAL MATH (Mundargi) [On behal of SRI S. R. BOMMAI (Kundgol)].—

Will the Minister for Revenue be pleased to state :—

(*a*) the number of acquisition proceedings for providing village sites pending in Kundgol Taluk (villagewise information may be furnished) ;

Statement showing the particulars of L.A. cases in Kundgol Taluk in respect of Village sites extension, District Dharwar.

Sl. No.	Name of the village	Purpose of acquisition	Year and date of inception	Present stage of the case — With whom pending
1	2	3	4	5
1	Mattigatti	Village Extension in S. Nos. 84 and 98 of Mattigatti.	29-11-1961	The matter is under consideration of Government.
2	Hirenarti	Village Extension in S. No. 7/44, 7/4B, 7/4C of Hirenarti.	19-2-1963	Notification under Section 4 (1) of the L.A. Act has been issued of 31st January 1969.
3	Pashupatihal	Village extension in S. No. 84, 85 and 86 of Pashupatihal.	14-6-1957	Draft award has been received by D.C. and it is under his examination.
4	Hanchinal	Village Extension in S. No. 28, 30, 34, 35 and 36 of Hanchinal.	5-8-1961	Do
5	Yaribudihal	Village Extension in S. Mo. 266 and 267 of Yeribudihal.	4-9-1961	The matter is under consideration of Government.
6	Pur	Village extension in S. No. 237 of Pur.	27-4-1955	Draft award has been approved by the Deputy Commissioner, Dharwar. Publication of award is held up for sanction of refund amount of

				Rs. 2,919 credited to T.F. I. N. T. in 1957. Proposals for refund returned to Assistant Commissioner, Savanur by D. C. on 10th January 1969 for further report.
7	Gudenkatti	Village Extension	25-6-1968	Notification under Section 4(1) of the L. A. Act has been issued on 17th January 1969.
8	Pur	Village extension in S. No. 320 of Pur.	19-11-1955	Award has been declared by the Assistant Commissioner, Savanur. But possession of the lands has not been handed over as the same is stayed by the Court. A civil suit is pending in Civil Court at Hubli.
9	Shirur	Village extension in S. No. 365 and 366 of Shirur.	19-11-1953	The Assistant Commissioner has declared the award on 16th February 1961 and the possession of the land has been taken over on 22nd April 1961. A reference has been made to the court on 7th August 1962 by D. C. The case is not yet decided in the court.

ಶ್ರೀ ಸಿ. ಎಂ. ಚುರ್ಚಿಹಾರ್‌ಮಠ್.—ಕೊಚ್ಚರತಕ್ಕ ಪರಿಶಿಷ್ಟದಲ್ಲಿ, ನಂ. 1 ರಲ್ಲಿ ಮುಟ್ಟಿಗಟ್ಟಿ ಎಂಬ ಗ್ರಾಮವು 1961 ನೇ ಇಸವಿಯಲ್ಲಿ ಪ್ರಾರಂಭವಾಗಿದ್ದರೂ ಕೂಡ ದಿ ಮ್ಯಾಟರ್ ಈಸ್ ಅಂಡರ್ ಕನ್ಸಿಡರೇಶನ್ ಎಂದು ಉತ್ತರದಲ್ಲಿದೆ. ಇದಕ್ಕೆ ಇನ್ನೂ ಎಷ್ಟು ವರ್ಷ ಆಗಬೇಕು ?

†ಶ್ರೀ ಎಚ್. ವಿ. ಕೌಜಲಗಿ.—ನಂಬರ್ 1 ಮತ್ತು 5 ರಲ್ಲಿ ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ. I will verify the answers. I doubt whether they are correct.

Mr. SPEAKER.—Does the Hon. Minister want that this question should be held over ?

Sri H. V. KOUJALGI.—Yes.

Mr. SPEAKER.—The question is held over.

Sri B. Bhasker Shetty may put question No. 457 on behalf of Sri Aithala.

South Kanara Fish Marketing Federation

457. Sri B. BHASKER SHETTY (Kaup) [on behalf of Sri P. V. Aithal (Surathkal)].—

Will the Minister for Fisheries and Ports be pleased to state :—

(*a*) whether the Government have received representation from the opposition M.L.As. of the South Kanara District for nomination of the M.L.As. from coastal areas of the District to the Executive Committee of the South Kanara Fish Marketing Federation ;

(*b*) if so, the action taken on the said representation ;

(*c*) whether there is any proposal to amend the bye-law so as to increase the number of Government nominated members in order to provide for representation by the coastal M.L.As. ?

Sri H. C. LINGA REDDY (Minister for Fisheries and Ports).—

(*a*) Yes.

(*b*) No action has been taken.

(*c*) No.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಉತ್ತರದಲ್ಲಿ, ಬಂದಿದೆ, ಯಾವ ಕ್ರಮವನ್ನೂ ತೆಗೆದುಕೊಂಡಿರುವುದಿಲ್ಲ ಎಂದು ಹೇಳಿದ್ದೀರಿ. ಏತಕ್ಕೋಸ್ಕರ ತೆಗೆದುಕೊಂಡಿಲ್ಲ, ಮತ್ತು ಇದರಲ್ಲಿರುವ ತೊಂದರೆ ಏನು ? ಎಂ. ಎಲ್. ಎ. ಬೇಡವೆಂದು ತೀರ್ಮಾನ ಮಾಡಿದ್ದೀರಾ ?

†ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇದು ಕೊ-ಆಪರೇಟಿವ್ ಇನ್‌ಸ್ಟಿಟ್ಯೂಶನ್ ಬೈರಾಸಿಗೆ ಸಂಬಂಧಪಟ್ಟದ್ದಾಗಿದೆ. ಈ ಅಮೆಂಡ್‌ಮೆಂಟನ್ನು ಕೋ-ಆಪರೇಟಿವ್ ಫೆಡರೇಶನ್ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಮಾಡಬೇಕೇ ವಿನಹ ಸರ್ಕಾರದವರು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಅದು ಡೆಮೋಕ್ರಾಟಿಕ್ ಬಾಡಿ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ಹಿಂದೆ ಒಬ್ಬ ಕಾಂಗ್ರೆಸ್ಸಿನ ಮುಖಂಡರಾದ ಜನಾಬ್ ಮಹಮ್ಮದ್ ಕಮಾಲ್ ಎಂಬವರನ್ನು ಈ ಸಂಸ್ಥೆಗೆ ಡೈರೆಕ್ಟರಾಗಿ ಸರ್ಕಾರದವರು ನಾಮಿನೇಟ್ ಮಾಡಿದ್ದಾರೆ, ಇದು ಸರಿಯೇ ?